Hosa Digantha

ಪೇರಿಕೆಯ ಬೋರಗ್ಣ ಅವರ ಕುಟುಂಬದ ಮೊತ್ತೆಯಲ್ಲಿ ಸೆಲ್ಕೋ ಆರ್ಥಿಕ ನಿರ್ದೇಶಕ ಹರೀಶ್ ಹಂದೆ, ರೋಟರಿ ಅಧ್ಯಕ್ಷ ಪ್ರಶಾಂತ್ ಸಿಂಹ ನಾಯಕ್ ಮುತ್ತಿತರರು.

ರೋಟರಿ 'ಸೌರ ಜ್ಯೋತಿ'

ಕಾನನದ ಮನೆಗಳ ಬೆಳಗಿದ ಸೌರ ಬೆಳಕು

ಮಂಗಳೂರು: ಪೇರಿಕೆ ಬೆಳ್ಳಂಗಡಿ ಮತ್ತು ಬಳ್ಳಮಗೆಯಂದು ಜಿಲ್ಲೆಗೆ ಗಡಿ ಭಾಗ. ಶಿಶಿಲದಿಂದ ಸುಮಾರು 9 ಕಿ.ಮೀ. ದೂರದಲ್ಲಿರುವ ಇಷ್ಟೂ ಅಭಿವೃದ್ಧಿ ಮರೀಚಿಕೆಯಾಗಿರುವ ಪ್ರದೇಶ. ಪೇರಿಕೆಯಿಂದ ಬಳ್ಳಮಗೆಯಂದ ಭೈರಾವುಲಕ್ಕೆ ಇಷ್ಟೇನು ಕೇವಲ ಎಂಟೇ ಕಿ.ಮೀ. ಇಲ್ಲಿಯ 11 ವರ್ಷ ವಯಸ್ಸಿನ ಬಾಲಕಿ ಸೌಜನ್ಯಳ ಮುಖದಲ್ಲಿಗೆ ಮೌನ ಆವರಿಸಿದೆ. ಚಿಮಣಿ ಬೆಳಕಿನಲ್ಲಿ ಓದಿ ಕಣ್ಣು ಉರಿದುಕೊಳ್ಳುತ್ತಿದ್ದ ಸೌಜನ್ಯ ಇದೀಗ ಸೌರ ಬೆಳಕಿನಲ್ಲಿ ಓದು ಮುಂದುವರಿಸಿದ್ದಾಳೆ.

ಸೌಜನ್ಯ ಪೇರಿಕೆಯ ಬೋರ ಎಂಬ ಕೃಷಿ ಕುಟುಂಬಕ್ಕೆಸೇರಿದ ಹೆಣ್ಮಗಳು. ಸೌಜನ್ಯ ಶಿಶಿಲದ ಸರಕಾರಿ ಶಾಲೆಯಲ್ಲಿ 6ನೇ ತರಗತಿ ಓದುತ್ತಿದ್ದಾಳೆ. ಮುಂಜಾನೆ 7 ಗಂಟೆಗೆ ಮನೆಯಿಂದ ಹೊರಗೆಂದು ಹೊರಟರೆ ಮತ್ತೆ ಮನೆ ಸೇರುವುದು ಸಂಜೆ 7 ಗಂಟೆ ಸುಮಾರಿಗೆ. ತಿಂಗಳ ಹಿಂದೆ ಬೋರಗ್ಣವರ ಮನೆಗೆ ಸೋಲಾರ್ ಬೆಳಕು ಬಂದಿದೆ. ಬೋರಗ್ಣರ ಕುಟುಂಬ ಈಗ ಸೋಲಾರ್ ಬೆಳಕಿನ ಆನಂದವನ್ನು ಅನುಭವಿಸುತ್ತಿದೆ.

ಶಿಶಿಲ ಅಂಬೆಲ್ಲದ ಗಣೇಶ ಅವರ ಮನೆಗೆ ಎರಡು ತಿಂಗಳ ಹಿಂದೆ ಸೌರದೀಪಗಳ ಜೋಡಣೆಯಾಗಿದೆ. 'ಸೌರದೀಪಗಳಿಂದ ಅನುಕೂಲವಾಗಿದೆ. ಸಾಲ್ಕು ದೀಪಗಳನ್ನು ಅಳವಡಿಸಿದ್ದೇವೆ. ತಿಂಗಳಿಗೆ ರೂ.350 ಬ್ಯಾಂಕ್ ಸಾಲ ಮಾಡಿಕೊಟ್ಟಿದ್ದೇವೆ. ಈಗ ಮಕ್ಕಳು ಬೆಳಿಯ ಸಮಯ ಎಚ್ಚರಾಗಿ ಹುಡುಕಾಟ ಮಾಡುವ ದುಸ್ಥಿತಿಯಿಂದ ನಾವು ದೂರಾಗಿದ್ದೇವೆ ಎನ್ನುತ್ತಾರೆ ಗಣೇಶ್'. ರಾಜ್ಯದಲ್ಲಿಯೇ ಅನುಮೋದನೆಗೊಂಡ ರೋಟರಿ ಕ್ಲಬ್ ಹಮ್ಮಿಕೊಂಡ ಸೌರಜ್ಯೋತಿ ಯೋಜನೆಯ ಬಗ್ಗೆ ಪೇರಿಕೆಯ ಯಜಮಾನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

■ ಸೌರ ಜ್ಯೋತಿ

ಬೆಳ್ಳಂಗಡಿಯ ರೋಟರಿ ಕ್ಲಬ್ 2019-11ನೇ ಸಾಲಿಗೆ ಹಮ್ಮಿಕೊಂಡ ವಿಶಿಷ್ಟ ಯೋಜನೆಯೇ 'ಸೌರ ಜ್ಯೋತಿ'. ವಿದ್ಯುತ್ ಕಂಬಗಳು ಅಸಾಧ್ಯವಾದ ಪ್ರದೇಶ ಹಾಗೂ ಮನೆಗಳ ಪ್ರದೇಶಗಳಲ್ಲಿರುವ ಬಡ ಕುಟುಂಬಗಳಿಗೆ ಸೋಲಾರ್ ಬಲ್ಬ್‌ನ ಮೂಲಕ ಬೆಳಕು ನೀಡುವ ಯೋಜನೆ ಇದಾಗಿದೆ.

■ ಸೋಲಾರ್ ಟೆಕ್ನಿಕಲ್ ಕೋರ್ಸ್

ಭವಿಷ್ಯದಲ್ಲಿ ಗ್ರಾಮೀಣ ಸಮೀಪ ಯುವಕರಿಗೆ ಸೋಲಾರ್ ಸೋಲಾರ್ ಟೆಕ್ನಿಕಲ್ ಕೋರ್ಸ್ ಅಳವಡಿಸುವ ಉದ್ದೇಶವನ್ನು ಹೊಂದಲಾಗಿದೆ. ಸೌರಶಕ್ತಿ ಬಳಕೆಯ ಮಾಹಿತಿ ಇದ್ದವರಿಗೆ ತರಬೇತಿ ನೀಡುವುದು ಉದ್ದೇಶವಾಗಿದೆ. ಸೌರಶಕ್ತಿ ಸಂರಕ್ಷಣೆಯಂತಹ ಸ್ವಾವಲಂಬಿಗಳಿದೆ ಎಂದು ಸೆಲ್ಕೋ ಆರ್ಥಿಕ ನಿರ್ದೇಶಕ ಹರೀಶ ಹಂದೆ ವಿವರಿಸಿದರು.

ಬೆಳ್ಳಂಗಡಿಯ ರೋಟರಿ ಕ್ಲಬ್, ಸೆಲ್ಕೋ ಸೋಲಾರ್ ಕಂಪನಿ ಹಾಗೂ ಎರಡು ಬ್ಯಾಂಕಗಳ ಪ್ರಯತ್ನದಿಂದ ಬೋರಗ್ಣರ ಮನೆ ಬೆಳಗಿದೆ. ಇದೇ ರೀತಿ ಕೇರಳ, ಶಿಶಿಲ ಮತ್ತು ನಿಡ್ಲೆಯ ನೂರು ಬಡ ಕುಟುಂಬಗಳು ಕೂಡಾ ಸೋಲಾರ್ ಬೆಳಕಿನಲ್ಲಿ ತಮ್ಮ ಮಕ್ಕಳನ್ನು ಬೆಳಗಿಸಿಕೊಂಡಿವೆ. ಇಷ್ಟೂ ಈ ಮೂರು ಗ್ರಾಮಗಳ 50 ಮನೆಗಳು ಸೌರ ಬೆಳಕಿನಲ್ಲಿ ಮಿಂದುಗೆದ್ದಿವೆ. 150 ಕುಟುಂಬಗಳಿಗೆ ಸೌರ ವಿದ್ಯುತ್ ಅಳವಡಿಸುವ ಸೌರಜ್ಯೋತಿ ರೂ.30 ಲಕ್ಷ ಮೊತ್ತದ ಯೋಜನೆಯಾಗಿದೆ. ಸೆಲ್ಕೋ ಸೋಲಾರ್ ಕಂಪನಿ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕು ಯೋಜನೆಯ ಅನುಷ್ಠಾನದಲ್ಲಿ ರೋಟರಿ ಕ್ಲಬ್ ಕೈ ಕೈಹಾಕಿದೆ.

ಕರ್ನಾಟಕದ ಗ್ರಾಮೀಣ ಭಾಗಗಳಲ್ಲಿ ಅತೀ ಹೆಚ್ಚು ಸೌರ ದೀಪ ಅಳವಡಿಸುವ ಖ್ಯಾತಿಯ ಸೆಲ್ಕೋ ಸಂಸ್ಥೆ 2 ಮಾಲಿ ಪ್ರತಿಷ್ಠಿತ ಗ್ರೀನ್‌ಆರ್ಥ್ ಪ್ರಶಸ್ತಿ ಪಡೆದಿದೆ. ಅಮೆರಿಕಾದ ಟೈಮ್ ಮ್ಯಾಗಜಿನ್ ಪ್ರಶಸ್ತಿಯೂ ಸಂಸ್ಥೆಗೆ ಲಭಿಸಿದೆ. ಇಂತಹ ಬಡವರ ಕಾಳಜಿಯ ಸಂಸ್ಥೆ ಸೌರ ಜ್ಯೋತಿ ಕಾರ್ಯಕ್ರಮಕ್ಕೆ ರೋಟರಿಯೊಂದಿಗೆ ಕೈ ಜೋಡಿಸಿರುವುದು ಹೆಮ್ಮೆಯ ಮತ್ತು ಮಾದರಿ ಸಹಯೋಗವಾಗಿದೆ ಎಂದು ಬೆಳ್ಳಂಗಡಿ ರೋಟರಿ ಕ್ಲಬ್ ಅಧ್ಯಕ್ಷ ಪ್ರಶಾಂತ್ ಸಿಂಹ ನಾಯಕ್ ಶನಿವಾರ ಉಜಿರೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾದರಿ ಬ್ಯಾಂಕಿಂಗ್

ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್ ಬಡ ಕುಟುಂಬಗಳು ಸುಮಾರು 2 ವರ್ಷಗಳ ಸೌರ ದೀಪ ಅಳವಡಿಸಿಕೊಳ್ಳಲು ಶೇ.40ರ ಬಡ್ಡಿಯಲ್ಲಿ ಭದ್ರತೆ ರಹಿತವಾಗಿ ದೀರ್ಘ ಅವಧಿಯ ಸಾಲ ನೀಡಿವೆ. ಇದು ಮಾದರಿ ಬ್ಯಾಂಕಿಂಗ್ ಸೇವೆಯಾಗಿದೆ ಎಂದು ಹೇಳಿದ ನಾಯಕ್, ಅಂತಹ ಸಾಲವನ್ನು ರೋಟರಿ ಕ್ಲಬ್ ಭರಿಸುತ್ತಿದೆ. ಸೆಲ್ಕೋ ಸಂಸ್ಥೆ ಯಾವುದೇ ಲಾಭ ರಹಿತವಾಗಿ ಸೋಲಾರ್ ದೀಪಗಳನ್ನು ಅಳವಡಿಸುತ್ತಿದೆ ಮತ್ತವಲ್ಲದೆ ಒಂದು ವರ್ಷ ಉಚಿತವಾಗಿ ನಿರ್ವಹಣೆಗೆ ಸಹಕರಿಸಿದೆ ಎಂದರು.

ಪವರ್‌ಕಟ್ ತೊಂದರೆ ಇಲ್ಲ

ಸೋಲಾರ್ ಬಲ್ಬು ಅಳವಡಿಕೆಯಿಂದ ಪವರ್ ಕಟ್ ತೊಂದರೆ ತಪ್ಪಿಸಬಹುದು. ಮೈನ್‌ಟೆನೆನ್ಸ್ ಸಮಸ್ಯೆ ಇರುವುದಿಲ್ಲ, ಪರಿಸರಕ್ಕೆ ಹಾನಿಯಾಗದು. ಮೀಣದ ಬತ್ತಿ ಮತ್ತು ಸೀಮೆ ಎಣ್ಣೆಗೆ ಕೊಳ್ಳುವ ವೆಚ್ಚವನ್ನು ಬ್ಯಾಂಕ್ ಸಾಲವನ್ನು ಹಂಚಬಹುದು ಎಂದು ಸೆಲ್ಕೋ ಆರ್ಥಿಕ ನಿರ್ದೇಶಕ ಹರೀಶ್ ಹಂದೆ ಸುದ್ದಿಗೆ ತಿಳಿಸಿದರು.

ಸೆಲ್ಕೋ ಲಾಭದ ಉದ್ದೇಶವನ್ನು ಹೊಂದಿಲ್ಲ, ಸೇವೆಯ ಮೇಲೆ ಸಂಸ್ಥೆ ವಿಶ್ವಾಸವಿಟ್ಟಿದೆ. ಪೃಥಮಾದರಲ್ಲಿ ಸೌರಶಕ್ತಿ ಬೇಕೆಂಬುದು ಸೆಲ್ಕೋದ ಧ್ಯೇಯವಾಗಿದೆ. ಗ್ರಾಮೀಣ ಭಾಗಕ್ಕನ್ನು ಬಲಪಡಿಸುವ ಸಲುವಾಗಿ ಪರ್ಯಾಯ ಇಂಧನವಾದ ಸೌರಶಕ್ತಿಗೆ ಆದ್ಯತೆ ನೀಡಲಾಗುತ್ತಿದೆ. ಭವಿಷ್ಯದಲ್ಲಿ ಗ್ರಾಮೀಣ ಭಾಗಕ್ಕೆ ಸೌರಶಕ್ತಿಯೇ ಪ್ರಮುಖ ಇಂಧನ ಮೂಲವಾಗಲಿದೆ. ಇದರಿಂದ ಗ್ರಾಮೀಣ ಭಾಗಕ್ಕನ್ನು ಬಲಪಡಿಸಬಹುದಾಗಿದೆ ಎಂದವರು ಪ್ರತಿಪಾದಿಸಿದರು.

ಬೆಳ್ಳಂಗಡಿ ತಾಲೂಕಿನ ಮೂರು ಗ್ರಾಮಗಳನ್ನು ಸೋಲಾರ್ ಗ್ರಾಮಗಳಾಗಿ ಪರಿವರ್ತಿಸುವ ರೋಟರಿ ಕ್ಲಬ್‌ನ ಮಾದರಿ ಯೋಜನೆಗೆ ಸೆಲ್ಕೋ ಬೆಂಬಲವಾಗಿ ನಿಂತಿದೆ ಎಂದು ಹಂದೆ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಉಜಿರೆ ಎಸ್‌ಡಿಎಂ ಕಾಲೇಜಿನ ಪ್ರಾಚಾರ್ಯ ಡಾ. ಯಶೋವರ್ಮ, ರೋಟರಿ ಕಾರ್ಯದರ್ಶಿ ಜಯರಾಮ, ಸೌರಶಕ್ತಿ ಯೋಜನಾ ನಿರ್ದೇಶಕ ಸದಾಶಿವ ಭಟ್, ಅಮೆರಿಕಾದ ಸೋಲಾರ್ ಕ್ಲೈಮೆಟ್ ಹೆಲ್ಪ್ ಮೊದಲಾದವರು ಉಪಸ್ಥಿತರಿದ್ದರು.